ಓ.ಎಸ್.ನಂ.62/15
ಡಿ.ಡಬ್ಲ್ಯು-1

**<u>ಸಾಕ್ಷಿಯನ್ನು ದಿಃ 05-12-2025 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ವಿ.ಎನ್ ವಕೀಲರಿಂದ.</u>**

ನಾನು 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ನಿಡಿ-18 ರಿಂದ 30 ದಾಖಲೆಗಳು ಯಾರಿಗೆ ಸಂಬಂಧಿಸಿದ್ದು ಎಂದು ಗೊತ್ತು. ನಿಡಿ-18 ರಲ್ಲಿ ಪ್ರತಿವಾದ ಪತ್ರದಲ್ಲಿ ಶೊಡ್ಯೂಲ್ ಅಸ್ತಿಯ ಬಗ್ಗೆ ನಮೂದು ಇಲ್ಲ ಎಂದರೆ ಸರಿಯಲ್ಲಿ. ನಿಡಿ-18 ಮತ್ತು ನಿಡಿ-19 ಯಾವುದೇ ಓಲಿಕೆ ಇಲ್ಲ ಎಂದರೆ ಸರಿಯಲ್ಲ. ನಿಡಿ-20 ರಲ್ಲಿ ಪ್ರತಿವಾದ ಪತ್ರದ ಶೆಡ್ಯೂಲ್ ಆಸ್ತಿ ಮತ್ತು ನಿಡಿ-19 ರಲ್ಲಿ ಇರುವ ಆಸ್ತಿ ನಮೂದು ಇಲ್ಲ ಎಂದರೆ ಸರಿಯಲ್ಲ. ನಿಡಿ-19 ಮತ್ತು ನಿಡಿ-20 ಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಡಿ-22 ರಲ್ಲಿ ಖಾತೆ ನಂಬರ್ ನ್ನು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದ ಪತ್ರದ ಆಸ್ತಿಯ ಮೂಲ ಮಾಲೀಕರು ವಿಶ್ವನಾಥ್ ರವರ ತಂದೆಯಾಗಿರುತ್ತಾರೆ. ಉದ್ದೇಶಪೂರ್ವಕವಾಗಿ ನಾನು 2005 ಕ್ಕಿಂತ ಹಿಂದಿನ ಋಣಭಾರ ಪತ್ರಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನಿಡಿ-24 ಮತ್ತು ನಿಡಿ-25, 28, 29 , 30 ಗಳನ್ನು ನಾನು ಸೃಷ್ಟಿ ಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ. ನಿಡಿ-27 ಕ್ಕೂ ಮತ್ತು ಪ್ರತಿವಾದ ಪತ್ರದ ಆಸ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ವಿಶ್ವನಾಥ್ ರವರೊಂದಿಗೆ ಮಿಲಾಪೆಯಾಗಿ ನಿಡಿ-18 ರಿಂದ ನಿಡಿ-30 ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ. ವಿಶ್ವನಾಥ್ ರವರಿಗಾಗಲೀ ಅಥವಾ ಅವರ ತಂದೆಯವರಿಗಾಗಲೀ ದಾವಾ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ಹಕ್ಕು ಅಧಿಕಾರ , ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ವಾದಿಯು ಈ ದಾವೆಯನ್ನು ಯಾವ ಸ್ವತ್ತಿಗೆ ಸಂಬಂಧಿಸಿದಂತೆ ಹಾಕಿರುತ್ತಾರೆ ಎಂದು ನನಗೆ ನೆನಪಿರುವುದಿಲ್ಲ . ನಾನು ಖರೀದಿ ಮಾಡಿರುತ್ತೇನೆಂದು ಹೇಳುವ ಆಸ್ತಿಗೂ ಮತ್ತು ದಾವಾ ಸ್ವತ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.
ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ
ಕುಣಿಗಲ್.